ಗೋಕರ್ಣ ಬಿಟ್ಟು ಹಚ್ಚಹಸುರಿನ ಕಾಡಿನ ಮಧ್ಯೆ ಚಲಿಸುತ್ತಿತ್ತು. 'ನೋಡಿದ್ರ ಗೋಕರ್ಣ ಕ್ಷೇತ್ರಾನ. ನಮ್ಮ ಉತ್ತರ ಕನ್ನಡ ಜಿಲ್ಲೆಯಲ್ಲಿ ಇಷ್ಟೊಂದು ಗಲೀಜು ಪಟ್ಟಣ ಮತ್ತೊಂದು ಇಲ್ಲ ಅನ್ನಿಸುತ್ತದೆ. ಗೋಕರ್ಣನಾಥೇಶ್ವರ ಇಲ್ಲಿಂದ ಜಾಗ ಖಾಲಿ ಮಾಡಿಕೊಂಡು ಹೋಗಿ ಪರ್ಮನೆಂಟಾಗಿ ಕಾಶಿಯಲ್ಲಿ ನೆಲೆಸಿರುವನಂತೆ. ಇಲ್ಲಿನ ಜನ ಹಾಗೆ ಮಾತನಾಡಿಕೊಳ್ಳುವುದು ಇತ್ತೀಚೆಗೆ ಜಾಸ್ತಿಯಾಗಿದೆ' ಎಂದು ನಕ್ಕಿದ್ದ. ಹನೇಹಳ್ಳಿಯಲ್ಲಿ ಸಂಭ್ರಮದ ಸ್ವಾಗತ ಸಿಕ್ಕಿತ್ತು. ಅನ್ನ, ಸಾರು, ಹಪ್ಪಳ, ಪಾಯಿಸದ ಊಟ ಆಗಿತ್ತು. ಜಿ.ವಿ. ಹೆಗಡೆಯ ಮೊಮ್ಮಗ ಆರೋಗ್ಯವಾಗಿಯೇ ಇದ್ದ. 'ಇವನನ್ನೂ ವಕೀಲಿಗಿರಿಗೆ ಇಳಿಸಿಬಿಡಿ' ಎಂದು ಮಗುವಿನ ಕೈಯಲ್ಲಿ ಐನೂರು ರೂಪಾಯಿ ಇಟ್ಟಿದ್ದೆ. 'ನೋಡ್ಡೋಣ, ಯಾರ ಹಣೆಯಲ್ಲಿ ಏನು ಬರೆದಿರುತ್ತದೆಯೋ. ಅದೇ ಪ್ರಯತ್ನವಂತೂ ಮಾಡ್ಬೇಕು' ಎಂದು ನಕ್ಕಿದ್ದ ನಾರಾಯಣ ಹೆಗಡೆ. ಹನೇಹಳ್ಳಿಯಿಂದ ಹೊರಟು ಓಂ ಬೀಚ್ ನೋಡಿಕೊಂಡು ತದಡಿಗೆ ಹಿಂತಿರುಗಿ ಮತ್ತೆ ಬೋಟ್ ಹತ್ತಿ ಅಘನಾಶಿನಿಯ ಹೆಗಡೆಯ ಮನೆ ತಲುಪಿದಾಗ ಸಂಜೆ ಆರೂವರೆ ಗಂಟೆಯಾಗಿತ್ತು. ಕತ್ತಲು ಮುಸುಕುತ್ತಿತ್ತು. ನೀರಿನ ಜುಳು ಜುಳು ನಿನಾದ ಕಿವಿ ತುಂಬಿಕೊಂಡಿತ್ತು. ಎಲ್ಲೆಲ್ಲೂ ನೀರನ್ನೇ ಕಂಡ ನನಗೆ ಕಣ್ಣುಗಳು ಒದ್ದೆಯಾದಂತೆ ಅನುಭವವಾಗಿತ್ತು. ಹೊರಗೆ ಮಳೆ ಶುರುವಿಟ್ಟುಕೊಂಡಿತ್ತು.

ನಾನು ಉಳಿದುಕೊಂಡಿದ್ದ ಮಹಡಿಯ ರೂಮಿನ ಟೇಬಲ್ ಮೇಲೆ ಒಂದು ಫುಲ್ ಬಾಟಲ್ ಗ್ಲೆನ್ಫಿಡಿಚ್ ವಿಸ್ಕಿ, ಸೋಡಾ ಮತ್ತು ನೀರಿನ ಬಾಟಲುಗಳನ್ನು ಜನಾರ್ದನ ಬಾಳಿಗ ತಂದಿಡುತ್ತಾ 'ಹೆಗಡೆ ದಿನವೂ ಒಂದೊಂದು ಪೆಗ್ ಡ್ರಿಂಕ್ಸ್ ತಗೊತಾನೆ, ವಿಸ್ಕಿ ಅಥವಾ ಬ್ರಾಂಡಿ. ನರಗಳ ವೀಕ್ನೆಸ್ಗೆ ಇದು ಒಳ್ಳೆಯದೆಂದು ಡಾಕ್ಟರ್ ಹೇಳಿರುವರಂತೆ. ಇವೊತ್ತು ಗ್ಲೆನ್ಫಿಡಿಚ್ ವಿಸ್ಕಿ ತೆಗೆದವನೆ ಅಂದ್ರೆ ಎರಡರಿಂದ ಎರಡೂವರೆ ಪೆಗ್ ಗ್ಯಾರಂಟಿ. ಇಂಥ ಕಾಸ್ಟ್ಲಿ ಡ್ರಿಂಕ್ಸ್ ತಗೊಳ್ಳೊವಾಗ ನನಗೂ ಒಂದೆರಡು ಪೆಗ್ ಕೊಡ್ತಾನೆ. ಅಂಜಲ್ ಮತ್ತು ಕಾಣೆ ಮೀನು ಐದು ಗಂಟೆಗೆ ತಂದು ಕ್ಲೀನ್ ಮಾಡಿ ಕೊಟ್ಟು ಹೋದ ಭೀಮನಾಯ್ಕ. ಫ್ರೆಶ್ ಅಂದ್ರೆ ಫ್ರೆಶ್. ನನ್ನ ಕೈಯಲ್ಲಿ ಫಿಶ್ ಫ್ರೈ ತಿನ್ನಲಿಕ್ಕೆ ಪುಣ್ಯ ಮಾಡಿರ್ಬೇಕು. ನಾನೂ ಹೆಗಡೆ ಊರಿನವನೇ. ಇಬ್ಬರೂ ಒಂದರಿಂದ ಹತ್ತನೇ ಇಯತ್ತಿನವರೆಗೂ ಕ್ಲಾಸ್ ಮೇಟ್ಸ್ ಬೇರೆ. ನಾನು ಹತ್ತನೇ ಇಯತ್ತಿನಲ್ಲಿ ಮ್ಯಾಥ್ಸ್ ಫೇಲಾಗಿ ಮುಂಬಯಿಗೆ ಓಡಿಹೋದೆ. ಇವ ಲಾ ಪಾಸುಮಾಡಿ ವಕೀಲಿಗಿರಿ ಶುರುವಿಟ್ಟುಕೊಂಡು ಒಳ್ಳೆ ಹೆಸರು ಮಾಡ್ದ. ಇವರಪ್ಪನ ಅಡಿಕೆ ಬಿಸಿನೆಸ್ಸನ್ನು ಇವ ಮುಂದುವರೆಸಿದ್ರೆ ಇವೊತ್ತು ಏನಿಲ್ಲ ಅಂದ್ರೂ ಐವತ್ತು ಕೋಟಿ ಕುಳ ಆಗಬಹುದಿತ್ತೆಂದು ಜನ ಎಲ್ಲಾ ಕಡೆ ಮಾತನಾಡ್ತಾರೆ. ಆದರೆ, ನಮ್ಮ ಹೆಗಡೆ ಅದೆಂಥಾದ್ದೊ ಕಮ್ಯುನಿಸ್ಟ್ ಸಿದ್ಧಾಂತಗಳಿಗೆ ಕಟ್ಟುಬಿದ್ದು ಈ ವಕೀಲ ವೃತ್ತಿಯನ್ನು ಹಿಡಿದುಬಿಟ್ಟ. ನಾನು ಬಾಂಬೆ, ಗೋವಾಗಳಲ್ಲಿ ಒಂದಷ್ಟು ವರ್ಷ ಹೋಟೆಲ್ ಬಿಸಿನೆಸ್ ಮಾಡಿದ್ದುಂಟು. ಮುಂಬೈನ ಜುಹೂನಲ್ಲಿರುವ ಮಹೇಶ್ ಲಂಚ್ ಹೋಂನಲ್ಲಿ ಎಂಟು ವರ್ಷ ಸರ್ವೀಸ್ ಮಾಡಿದೆ. ಹೆಂಡತಿಗೆ ಕ್ಯಾನ್ಸರ್ ಬಂದು ದುಡಿದಿದ್ದೆಲ್ಲ ಆಸ್ಪತ್ರೆಗೆ ಸುರಿದಿದ್ದಾಯ್ತು. ಕಡೆಗೂ ಹೆಂಡತಿಯನ್ನು ಉಳಿಸಿಕೊಳ್ಳಲು ಆಗಲಿಲ್ಲ. ಮುಂಬಯಿಯಿಂದ ಬರಿಗೈಯಲ್ಲಿ ಊರಿಗೆ ಬಂದ ಮೇಲೆ ಜಿ.ವಿ. ಹೆಗಡೆ ಇಲ್ಲಿರುವುದು ಗೊತ್ತಾಗಿ ಬಂದುಬಿಟ್ಟೆ. ತಿಂಗಳಿಗೆ ಹತ್ತು ಸಾವಿರ, ಹೊಟ್ಟೆ ತುಂಬಾ ಊಟ, ದಿನ ಒಂದಿಷ್ಟು ಗುಂಡು ಹಾಕಲೂ ನೋಡಿಕೊಳ್ತಾನೆ ಹೆಗಡೆ. ಅವನ ಎಂಥಾ ಚಾಕರಿಯನ್ನಾದರೂ ಕಣ್ಮುಚ್ಚಿಕೊಂಡು ಮಾಡುತ್ತೇನೆ. ಹೆಗಡೆ ಹವ್ಯಕ ಬ್ರಾಹ್ಮಣ. ನಾನು ಜಿ.ಆರ್.ಬಿ ಅಂದರೆ ಗೌಡ ಸಾರಸ್ವತ ಬ್ರಾಹ್ಮಣ. ನಾವು ನಾನ್ ವೆಜ್ ಬ್ರಾಹ್ಮಣರು, ಹವ್ಯಕರು ವೆಜಿಟೇರಿಯನ್ಸ್. ಈಗ ಅವರೂ ಸರಿಯಾಗಿ ಬಾರಿಸ್ತಾರೆ ಬಿಡಿ. ಮೊದಲೆಲ್ಲ ಒಬ್ಬರಿಗೊಬ್ಬರನ್ನು ಕಂಡರೆ ಆಗುತ್ತಿರಲಿಲ್ಲ, ಈಗ ಬಿಡಿ, ಎರಡೂ ಜಾತಿಗಳೂ ಒಂದರೊಳಗೊಂದು ಬೆರೆಕೆಯಾಗಿಬಿಟ್ಟಿವೆ. ನನ್ನ ಮತ್ತು ಹೆಗಡೆಯ ನಡುವೆ ಮಾತ್ರ ಯಾವೊತ್ತೂ ಆ ಭಾವನೆ ಬಂದಿದ್ದೇ ಇಲ್ಲ ಮತ್ತು ನಮ್ಮ ನಾರಾಯಣ ಹೆಗಡೆ ಸಹ ಗುಣಲಕ್ಷಣಗಳಲ್ಲಿ ಥೇಟ್ ಅಪ್ಪನ ಪಡಿಯಚ್ಚೇ ಸರಿ...' ಜನಾರ್ದನ ಬಾಳಿಗ ಮತ್ತಷ್ಟು ಮಾತನಾಡುತ್ತಿದ್ದನೇನೋ; ಅಷ್ಟರಲ್ಲಿ ಜಿ.ವಿ. ಹೆಗಡೆ ನಾರಾಯಣ ಹೆಗಡೆಯ ಸಹಾಯದಿಂದ ಮೆಲ್ಲನೆ ಮೆಟ್ಟಿಲು ಹತ್ತಿ ರೂಮಿಗೆ ಬಂದಿದ್ದರಿಂದ ಮಾತು ನಿಲ್ಲಿಸಿದ್ದ. 'ಇವನ ಬಾಯಿ ನಮ್ಮ ಅಘನಾಶಿನಿಯ ಹಾಗೆ ಸದಾ ಭೋರ್ಗರೆಯುತ್ತಾ ಇರುತ್ತದೆ. ಆದರೆ, ನನ್ನ ಆರೋಗ್ಯ ಧೃಡವಾಗಿರಲು ಅಘನಾಶಿನಿಯ ಜುಳು ಜುಳುನಾದ ಇವನ ಆರೈಕೆ